# ಕರ್ನಾಟಕ ಪಂಚಾಯತ್ ರಾಜ್ಯ ಸೀಮಾ ನಿರ್ಣಯ ಆಯೋಗ

**ದಿನಾಂಕ 24-12-2021ರ ಶುಕ್ರವಾರ ಅಪರಾಹ್ನ 3.30 ಗಂಟೆಗೆ ಮಾನ್ಯತೆ ಪಡೆದಿರುವ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಡನೆ ನಡೆದ ಸಭೆಯ ನಡವಳಿಗಳು.**

**ಸಭೆಯಲ್ಲಿ ಹಾಜರಿದ್ದವರು:**

1. ಶ್ರೀ ಎಂ.ಲಕ್ಷ್ಮಿನಾರಾಯಣ, ಅಧ್ಯಕ್ಷರು.
2. ಶ್ರೀ ಎಸ್.ಎಸ್.ಪಟ್ಟಣಶೆಟ್ಟಿ, ಸದಸ್ಯರು.
3. ಶ್ರೀ ಎಸ್.ಆರ್.ರಾಮಪ್ರಿಯ, ಸದಸ್ಯರು.
4. ಶ್ರೀ ಎಂ.ಕೆ ಕೆಂಪೇಗೌಡ, ಸಮನ್ವಯಾಧಿಕಾರಿ.
5. ಶ್ರೀ ನಿಂಗೇಗೌಡ, ಸಮಾಲೋಚಕರು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
6. ಶ್ರೀಮತಿ ಎಂ.ಚೇತನ, ಸರ್ಕಾರದ ಅಧೀನ ಕಾರ್ಯದರ್ಶಿ (ಜಿ.ಪಂ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
7. ಶ್ರೀ ಅಶ್ವತ್ಥನಾರಾಯಣ, ಭಾ.ಜ.ಪಕ್ಷದ ಪ್ರಧಾನ ಕಾರ್ಯದರ್ಶಿ.
8. ಶ್ರೀ ಎಸ್.ರಮೇಶ್, ಜನತಾದಳ (ಜಾ) ಪಕ್ಷದ ಕಾರ್ಯದರ್ಶಿ
9. ಶ್ರೀ ಆರ್. ಮುನಿಯಪ್ಪ, ಬಹುಜನ ಸಮಾಜ ಪಕ್ಷದ ಕಾರ್ಯದರ್ಶಿ.

*****

ಆಯೋಗದ ಸಮನ್ವಯಾಧಿಕಾರಿ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಲಹೆಗಾರರಾದ ಶ್ರೀ ಎಂ.ಕೆ ಕೆಂಪೇಗೌಡ ರವರು ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು, ಸದಸ್ಯರುಗಳು ಮತ್ತು ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನು ಸಭೆಗೆ ಸ್ವಾಗತಿಸಿದರು ಹಾಗೂ ಸಭೆಯನ್ನು ನಡೆಸಿಕೊಡುವಂತೆ ಅಧ್ಯಕ್ಷರಲ್ಲಿ ವಿನಂತಿಸಿಕೊಂಡರು.

ಅಧ್ಯಕ್ಷರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ಈ ಹಿಂದೆ ದಿನಾಂಕ:15-12-2021ರಂದು ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಡನೆ ನಡೆಸಿದ ಸಭೆಯ ಪ್ರಮುಖ ಅಂಶಗಳನ್ನು ಸಭೆಯಲ್ಲಿ ವಿವರಿಸಿದರು. ಈ ಹಿಂದಿನ ಸಭೆಯಲ್ಲಿ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಕೋರಿದ್ದಂತೆ ಮತ್ತೊಂದು ಸಭೆಯನ್ನು ಈ ದಿನ ಆಯೋಜಿಸಿರುವುದಾಗಿ ಸಭೆಯಲ್ಲಿ ತಿಳಿಸುತ್ತಾ ಸಭೆಯಲ್ಲಿ ಹೊಸದಾಗಿ ಹಾಜರಾಗಿದ್ದ ಶ್ರೀ ಆರ್. ಮುನಿಯಪ್ಪ ಕಾರ್ಯದರ್ಶಿ, ಬಹುಜನ ಸಮಾಜ ಪಕ್ಷ ರವರನ್ನು ಉದ್ದೇಶಿಸಿ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿಗಳ ಚುನಾವಣಾ ಕ್ಷೇತ್ರಗಳನ್ನು ಗುರುತಿಸುವ ಬಗ್ಗೆ ಸಲಹೆ/ಸೂಚನೆಗಳನ್ನು ನೀಡುವಂತೆ ಕೋರಿದರು. ಈ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಆರ್. ಮುನಿಯಪ್ಪ, ಕಾರ್ಯದರ್ಶಿ, ಬಹುಜನ ಸಮಾಜ ಪಕ್ಷ ಇವರು ಮಾತನಾಡುತ್ತಾ, ಪಂಚಾಯತ್ ರಾಜ್ ಚುನಾವಣಾ ಕ್ಷೇತ್ರಗಳ ವಿಂಗಡಣೆ, ಮೀಸಲಾತಿ ಮುಂತಾದ ವಿಷಯಗಳ ಬಗ್ಗೆ ಅವರಿಗೆ ಹೆಚ್ಚಿಗೆ ಮಾಹಿತಿ ಇರುವುದಿಲ್ಲವೆಂದು ತಿಳಿಸುತ್ತಾ, ಈ ಸಂಬಂಧವಾಗಿ ಹೆಚ್ಚಿನ ಮಾಹಿತಿ

ಒದಗಿಸುವಂತೆ ಸಭೆಯಲ್ಲಿ ವಿನಂತಿಸಿಕೊಂಡರು. ಮುಂದುವರೆದು, ಮತಕ್ಷೇತ್ರಗಳನ್ನು ಗುರುತಿಸುವಾಗ ಸ್ಥಳೀಯವಾಗಿ ಉಂಟಾಗುವ ಸಮಸ್ಯೆಗಳನ್ನು ಆಯೋಗದ ಗಮನಕ್ಕೆ ತಂದರು. ಇದಕ್ಕೆ ಪ್ರತಿಕ್ರಿಯಿಸಿದ ಅಧ್ಯಕ್ಷರು ಮತ್ತು ಸದಸ್ಯರುಗಳು ಪಂಚಾಯತ್ ರಾಜ್ ಚುನಾವಣಾ ವ್ಯವಸ್ಥೆ ಹಾಗೂ ಕ್ಷೇತ್ರಗಳ ಗುರುತಿಸುವಿಕೆ ಸಂಬಂಧಿಸಿದ ನಿಯಮಗಳ ಕುರಿತು ಯಾವ ಸಮಯದಲ್ಲಾದರು ಆಯೋಗವನ್ನು ಸಂಪರ್ಕಿಸಿ ಮಾಹಿತಿ ಪಡೆದುಕೊಳ್ಳಬಹುದೆಂದು ತಿಳಿಸಿದರು. ಈ ಉದ್ದೇಶಕ್ಕಾಗಿಯೇ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿಗಳ ಚುನಾವಣಾ ಕ್ಷೇತ್ರಗಳನ್ನು ನಿರ್ಧರಿಸುವ ಪೂರ್ವದಲ್ಲಿ ಸ್ಥಳೀಯವಾಗಿ ಸಾರ್ವಜನಿಕ ಮುಖಂಡರ ಜನಪ್ರತಿನಿಧಿಗಳ ಅಭಿಪ್ರಾಯವನ್ನು ಪಡೆದುಕೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸುವುದಾಗಿ ತಿಳಿಸಿದರು. ಸಭೆಯಲ್ಲಿ ಹಾಜರಿದ್ದ ಶ್ರೀ ಅಶ್ವಥನಾರಾಯಣ, ಭಾ.ಜ.ಪಕ್ಷದ ಪ್ರಧಾನ ಕಾರ್ಯದರ್ಶಿ ಹಾಗೂ ಶ್ರೀ ಎಸ್. ರಮೇಶ್, ಜನತಾದಳ (ಜಾ) ಪಕ್ಷದ ಕಾರ್ಯದರ್ಶಿ ರವರುಗಳು ಮಾತನಾಡುತ್ತಾ, ಜಿಲ್ಲಾ ಪ್ರತಿನಿಧಿಗಳೊಡನೆ ಚರ್ಚಿಸಿ ಅವರುಗಳ ಅನಿಸಿಕೆಗಳನ್ನು ಸಂಗ್ರಹಿಸಲು ಕಾಲಾವಕಾಶ ಹೆಚ್ಚಿಗೆ ಇಲ್ಲದ ಕಾರಣ ಈ ಸಭೆಯಲ್ಲಿ ಜಿಲ್ಲಾ ಪ್ರತಿನಿಧಿಗಳ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಸಾಧ್ಯವಾಗದ ಕಾರಣ ರಾಜಕೀಯ ಪಕ್ಷದ ಪ್ರಮುಖರೊಡನೆ ಮತ್ತೊಂದು ಸಭೆಗೆ ಅವಕಾಶ ಮಾಡಿಕೊಡುವಂತೆ ಅಧ್ಯಕ್ಷರಲ್ಲಿ ವಿನಂತಿಸಿದರು. ಇದಕ್ಕೆ ಪ್ರತಿಕ್ರಿಯಿಸುತ್ತಾ, ಅಧ್ಯಕ್ಷರು, ಸೀಮಾ ನಿರ್ಣಯ ಪ್ರಕ್ರಿಯೆ ಮುಂದುವರೆದು, ಕರಡು ಪ್ರಸ್ತಾವನೆಗಳನ್ನು ಪ್ರಕಟ ಮಾಡಿದ ನಂತರದಲ್ಲಿ ಅಹವಾಲು, ಆಕ್ಷೇಪಣೆಗಳನ್ನು ಪರಿಶೀಲಿಸುವ ಹಂತದಲ್ಲಿ ಸೇರುವ ಅವಕಾಶ ಲಭ್ಯವಿದೆಯೆಂದು ತಿಳಿಸಿದರು.

ಮುಂದುವರೆದು, ಈ ಸಭೆಯಲ್ಲಿಯೂ ಸಹ, ಜಿಲ್ಲಾ ಪಂಚಾಯತಿ/ತಾಲ್ಲೂಕು ಪಂಚಾಯತಿ ಚುನಾವಣಾ ಕ್ಷೇತ್ರಗಳನ್ನು ಜಿಲ್ಲೆ ಹಾಗೂ ತಾಲ್ಲೂಕುಗಳಿಗೆ ಸೀಮಿತಗೊಳಿಸದೇ ವಿಧಾನಸಭಾ ಕ್ಷೇತ್ರವಾರು ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿ ಸದಸ್ಯರ ಚುನಾವಣಾ ಕ್ಷೇತ್ರಗಳನ್ನು ನಿಗಧಿಗೊಳಿಸುವ ಬಗ್ಗೆ ಆಯೋಗ ಚಿಂತನೆ ನಡೆಸಬೇಕೆಂದು ಕೋರಿದರು. ಈ ಬಗ್ಗೆ ಪ್ರತಿಕ್ರಿಯಿಸಿದ ಸದಸ್ಯರುಗಳಾದ ಶ್ರೀ ಎಸ್.ಆರ್. ರಾಮಪ್ರಿಯಾ ಮತ್ತು ಶ್ರೀ ಎಸ್.ಎಸ್. ಪಟ್ಟಣಶೆಟ್ಟಿ ರವರು ರಾಜ್ಯ ಪಂಚಾಯತಿ ಸೀಮಾ ನಿರ್ಣಯ ಆಯೋಗವು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣಗಳನ್ವಯ ಅಧಿಕಾರ ಮತ್ತು ಪ್ರಕ್ರಿಯೆಗಳನ್ನು ನಿರ್ವಹಿಸಬೇಕಾಗಿರುವುದರಿಂದ ರಾಜಕೀಯ ಪಕ್ಷದ ಪ್ರತಿನಿಧಿಗಳು ಕೋರಿದ ಅಂಶವನ್ನು ಪರಿಗಣಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದರು.

ಸಭೆಗೆ ಆಗಮಿಸಿದ್ದ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಹಾಗೂ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಗೆ ಮತ್ತು ಅಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸುವ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಸಂಖ್ಯೆ: ಗ್ರಾಅಪಂರಾ 319 ಜಿಪಸ 2021**

(ಎಂ.ಲಕ್ಷ್ಮೀನಾರಾಯಣ)
ಅಧ್ಯಕ್ಷರು,
ಕರ್ನಾಟಕ ಪಂಚಾಯತ್ ರಾಜ್ಯ
ಸೀಮಾ ನಿರ್ಣಯ ಆಯೋಗ